# ರಸ್ತೆಯಲ್ಲೇ ಕುಸ್ತಿ ಪೈಲ್ವಾನರು!

ಕುಸ್ತಿ, ಭಾರ ಎತ್ತುವುದು, ಹಾಗೂ ದೇಹದಾರ್ಢ್ಯ ಕ್ರೀಡೆಗಳಲ್ಲಿ ಮಂಗಳೂರಿನ ಕ್ರೀಡಾ ಪ್ರತಿಭೆಗಳು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಯಶಸ್ಸು ಗಳಿಸಿ ಮಿಂಚಿದ್ದಾರೆ. ಖ್ಯಾತ ಕುಸ್ತಿ ಪೈಲ್ವಾನ್ ಆಗಿದ್ದು, ಕುಸ್ತಿ ಪಂದ್ಯಾಟದ ಉತ್ತಮ ಸಂಘಟಕರೂ ಆಗಿದ್ದ ಮಾಜಿ ಶಾಸಕ ದಿ.ಎಂ.ಲೋಕಯ್ಯ ಶೆಟ್ಟಿ ಅವರ ನೆನಪಿಗಾಗಿ ಮಂಗಳೂರಿನ ಎಂ.ಜಿ.ರಸ್ತೆಯಿಂದ ಮಣ್ಣಗುಡ್ಡೆಗೆ ತೆರಳುವ ಮುಖ್ಯ ರಸ್ತೆಗೆ ಇತ್ತೀಚೆಗೆ ಲೋಕಯ್ಯ ಶೆಟ್ಟಿ ರಸ್ತೆ ಎಂದು ಪುನರ್ ನಾಮಕರಣಗೊಳಿಸಲಾಯಿತು. ಈ ಸಂದರ್ಭದಲ್ಲಿ ನವೀಕೃತ ಬಳ್ಳಾಲ್‌ಬಾಗ್ ವೃತ್ತದಲ್ಲಿ ಸ್ಥಾಪಿಸಲಾದ ಮಣ್ಣಿನ ಕುಸ್ತಿಯಲ್ಲಿ ತೊಡಗಿರುವ ಕುಸ್ತಿ ಪೈಲ್ವಾನರ ಆಕರ್ಷಕ ಪ್ರತಿಮೆಗಳು ಎಲ್ಲರ ಗಮನ ಸೆಳೆಯುತ್ತಿವೆ.

**– ಸತೀಶ್ ಶೆಟ್ಟಿ ಕೊಡಿಯಾಲ್‌ಬೈಲ್, ಮಂಗಳೂರು**





# ಫೈಬರ್‌ನ ಶೈಕ್ಷಣಿಕ ಶಾಸನಗಳು!

ವಿವಿಧ ಶಾಸನಗಳು ಗತಕಾಲದ ಚರಿತ್ರೆಯನ್ನು ತಿಳಿದುಕೊಳ್ಳಲು ಸಹಾಯಕ. ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಆಗಾಗ ಶಾಸನಗಳು ದೊರೆತ ಬಗ್ಗೆ ಸುದ್ದಿ ಓದುತ್ತೇವೆ. ಈ ಚಿತ್ರದಲ್ಲಿ ಕಾಣುವ ಶಾಸನಗಳು ಎಲ್ಲೋ ಸಿಕ್ಕಿದ ಅಥವಾ ಉತ್ಖನನ ಮಾಡಿದಾಗ ದೊರೆತ ಶಾಸನಗಳಲ್ಲ. ನೋಡುವುದಕ್ಕೆ ನಿಜವಾದ ಶಾಸನಗಳಂತೆ ಕಂಡು ಬರುವ ಇವು ಮಾದರಿ ಶಾಸನಗಳು. ಅಂದರೆ ಇವುಗಳನ್ನು ಫೈಬರ್‌ನಿಂದ ಮಾಡಲಾಗಿದೆ. ಶೈಕ್ಷಣಿಕ ಸಂಪನ್ಮೂಲ ಕೇಂದ್ರ ಬೆಂಗಳೂರು, ಧಾರವಾಡದಲ್ಲಿ ಇತಿಹಾಸ ಶಿಕ್ಷಕರಿಗೆ ತರಬೇತಿ ಸಂದರ್ಭದಲ್ಲಿ ಬಳಸಲು ಇವುಗಳನ್ನು ಕಲಾವಿದ ಸಂಗಮೇಶ ಅಂಗಡಿ ಗಜೇಂದ್ರಗಡ ಅವರು ಮಾಡಿ ಕೊಟ್ಟಿದ್ದಾರೆ.

**–ಈರಣ್ಣ ಬೆಂಗಾಲಿ, ರಾಯಚೂರು**

# ಎಣ್ಣೆ ಕಲ್ಲು

ಹಿಂದಿನ ಕಾಲದಲ್ಲಿ ಗಾಣಿಗರು ಎಣ್ಣೆ ಬೀಜಗಳಿಂದ ಎಣ್ಣೆ ತೆಗೆಯಲು ಬೀಸುವ ಕಲ್ಲು ಅಥವಾ ಒಳಕಲ್ಲಿನಂತೆ ಕಾಣುವ ಕಲ್ಲಿನ ಮಧ್ಯದಲ್ಲಿ ಎಣ್ಣೆ ಬೀಜಗಳನ್ನು ಹಾಕಿ ಮತ್ತೊಂದು ದುಂಡಗಿರುವ ಕಲ್ಲಿನಿಂದ ಕುಟ್ಟಿ, ರುಬ್ಬಿ ಎಣ್ಣೆ ತೆಗೆಯುತ್ತಿದ್ದರು. ಈ ಎಣ್ಣೆ ಬಹಳ ರುಚಿಕರವಾಗಿರುತ್ತಿತ್ತು ಮತ್ತು ಆರೋಗ್ಯಕರವಾಗಿತ್ತು. ಇಂತಹ ಎಣ್ಣೆಕಲ್ಲಿದು. ಈಗ ಯಂತ್ರಗಳನ್ನು ಬಳಸಿ ಬೀಜಗಳಿಂದ ಎಣ್ಣೆ ತೆಗೆಯುವುದು ಬಹಳ ಸುಲಭ.

**–ಪಂಪಾಪತಿ ಹಿರೇಮಠ, ಧಾರವಾಡ**

